**3** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ**.,**ರವರ ನ್ಯಾಯಾಲಯ**,**
ಕಡೂರು**.**

<u>ಅಸಲು ದಾವೆ ಸಂಖ್ಯೆ. 719: 2023</u>

ಡಿ.ಡಬ್ಲ್ಯು:1

ದಿನಾಂಕಃ **07.01.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**.**

<u>ಮುಖ್ಯ ವಿಚಾರಣೆಃ **1** ನೇ ಪ್ರತಿ ವಾದಿಪರ ಶ್ರೀ**.** ಎ ಎಸ್ ಎಸ್ ವಕೀಲರಿಂದಃ**-**</u>

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸುತ್ತಿದ್ದೇನೆ. ಅದನ್ನು ಓದಿ ತಿಳಿದು, ಸಹಿ ಮಾಡಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ.

ಪಾಟೀ ಸವಾಲು ಃ ಶ್ರೀ ಕೆ ಎನ್ ಆರ್ ವಕೀಲರಿಂದ ಃ

ವಾದಿಯು ನನ್ನ ತಂಗಿ ಎಂದರೆ ಸರಿ. ನನ್ನ ತಂದೆ ಹೆಸರು ಮಹಾಲಿಂಗಪ್ಪ. ನನ್ನ ಅಜ್ಜನ ಹೆಸರು ನನ್ನಯ್ಯಪ್ಪ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂರದೆ ಸರಿ. ಸಾಕ್ಷಿ ಮುಂದುವರೆದು ಆಸ್ತಿಗಳನ್ನು ನಾನೇ ಅಭಿವೃದ್ಧಿಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ತಂದೆ ಮರಣ ಹೊಂದಿ ಸುಮಾರು 50 ವರ್ಷಗಳಾಗಿರಬಹುದು. ನನ್ನ ತಂದೆ ಮರಣ ಹೊಂದುವ ಸಮಯದಲ್ಲಿ ನನ್ನ ಅಜ್ಜ ಜೀವಂತವಾಗಿದ್ದರು. ದಾವಾ ಆಸ್ತಿಯ ಖಾತೆಯು ನನ್ನ ಅಜ್ಜನಿಂದ ನೇರವಾಗಿ ಪೌತಿ ಆಧಾರದ ಮೇಲೆ ನನ್ನ ಹೆಸರಿಗೆ ಬಂದಿರುತ್ತದೆ. ಐಟಂ ನಂ 1 ರಿಂದ 3 ರ ಆಸ್ತಿಗಳು ಅಡಿಕೆ ತೋಟಗಳು ಎಂದರೆ ಸರಿ. ಐಟಂ ನಂ 4 ರ ಅಸ್ತಿ ಖುಷ್ಕಿ ಜಮೀನು ಎಂದರೆ ಸರಿ. ದಾವಾ ಐಟಂ ನಂ 1 ರಿಂದ 3 ಈ ಹಿಂದೆ ತೆಂಗಿನ ತೋಟವಾಗಿತ್ತು ಎಂದರೆ ಸಾಕ್ಷಿ ಅದು ಭಂಜರು ಭೂಮಿಯಾಗಿತ್ತು ಎಂದು ನುಡಿಯುತ್ತಾರೆ. ನನಗೆ ದಾವಾ ಆಸ್ತಿಗಳಲ್ಲಿ ಸಾಕಷ್ಟು ಆದಾಯ ಬರುತ್ತಿತ್ತು ಎಂದರೆ ಸರಿಯಲ್ಲ.

ನಮ್ಮ ಊರಿನಲ್ಲಿ ಎರಡು ಕೆರೆಗಳು ಇರುತ್ತವೆ, ಅವುಗಳೆಂದರೆ ಊರ ಮುಂದಲ ಕೆರೆ ಮತ್ತು ಬಕ್ಕಸಮುದ್ರ ಕೆರೆ. ಈ ಎರಡೂ ಕೆರೆಗಳಿಂದ ದಾವಾ ಆಸ್ತಿಗೆ ನೀರು ಬರುತ್ತದೆ ಎಂದರೆ ಸರಿಯಲ್ಲ. ಭದ್ರಾ ಕಾಲುವೆ ನಿರ್ಮಾಣವಾಗಿರುವ ಕಾರಣ ಈ ಎರಡೂ ಕೆರೆಗಳು ತುಂಬಿರುತ್ತವೆ ಎಂದರೆ ಸರಿ. ಕೊಳವೆಬಾವಿಯಿಂದ ಸಾಕಷ್ಟು ನೀರು ಸಿಗುತ್ತದೆ ಎಂದರೆ ಸಾಕ್ಷಿ ನಮ್ಮ ಭೂಮಿಗೆ ನೀರು ಇಲ್ಲಾ ಎಂದು ನುಡಿಯುತ್ತಾರೆ. ವಾದಿಗೆ ಮದುವೆಯಾದ ನಂತರ ನಮ್ಮ ಕುಟುಂಬದಲ್ಲಿ ಯಾವುದೇ ವಿಭಾಗವಾಗಿಲ್ಲ ಎಂದರೆ ಸಾಕ್ಷಿ ನಾನು ಮದುವೆ

ಮಾಡಿಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ತಂಗಿಯ ಮದುವೆಯನ್ನು ಊರಿನ ಸೋಮೇಶ್ವರ ದೇವಸ್ಥಾನದಲ್ಲಿ 1995 ರಲ್ಲಿ ಮದುವೆ ಮಾಡಿಕೊಟ್ಟಿರುತ್ತೇನೆ. ಸಾಕ್ಷಿ ಮುಂದುವರೆದು ಆ ಸಮಯದಲ್ಲಿ ನಮ್ಮ ಊರಿನ ಮದುವೆ ಕಲ್ಯಾಣ ಮಂಟಪವು ಸೋಮೇಶ್ವರ ದೇವಸ್ಥಾನದ ಸಮುದಾಯ ಭವನ ಆಗಿತ್ತು ಎಂದು ನುಡಿಯುತ್ತಾರೆ.

ದಾವಾ ಐಟಂ ನಂ 1 ರಿಂದ 3 ಒಟ್ಟು 8 ಎಕರೆ ವಿಸ್ತೀರ್ಣ ಇರುತ್ತದೆ ಎಂದರೆ ಸಾಕ್ಷಿ 7 ಎಕರೆ 20 ಗುಂಟೆ ಇರುತ್ತದೆ ಎಂದು ನುಡಿಯುತ್ತಾರೆ. ಅದರಲ್ಲಿ ತೆಂಗು ಅಡಿಕೆ ಬೆಳೆದಿರುತ್ತದೆ ಎಂದರೆ ಸರಿ. ನನಗೆ ಅಡಿಕೆಯಿಂದ ರೂ. 21.00 ಲಕ್ಷ ಮತ್ತು ತೆಂಗಿನ ತೋಟದಿಂದ ರೂ. 4.00 ಲಕ್ಷ ಒಟ್ಟು ರೂ. 25.00 ಲಕ್ಷ ಆದಾಯ ಇದೆ ಎಂದರೆ ಸರಿಯಲ್ಲ. ನಾನು ನನ್ನ ತಂಗಿಯ ಮದುವೆಯನ್ನು ಅದ್ದೂರಿಯಾಗಿ ವಡವೆ ಮತ್ತು ವರದಕ್ಷಿಣೆ ನೀಡಿ ಮಾಡಿರುತ್ತೇನೆ, ಅದರ ಬಗ್ಗೆ ದಾಖಲೆ ಇಲ್ಲ. ದಾವಾ ಆಸ್ತಿಯನ್ನು ಅಭಿವೃದ್ಧಿಪಡಿಸಲು ಮಾಡಿರುತ್ತೇನೆ ಎಂದು ಹೇಳಿರುವ ಸಾಲಕ್ಕೆ ನನ್ನ ಬಳಿ ದಾಖಲೆ ಇರುತ್ತದೆ. ನಾನು ಡಿಸಿಸಿ ಬ್ಯಾಂಕಿನಲ್ಲಿ ರೂ. 10.00 ಲಕ್ಷ ಮತ್ತು ಖಾಸಗಿ ವ್ಯಕ್ತಿಗಳಿಂದ ರೂ. 15.00 ಲಕ್ಷ ಸಾಲ ಪಡೆದಿರುತ್ತೇನೆ. ಸಾಕ್ಷಿಗೆ ನಿಪಿ-12 ರ ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆಯೇ ನಾನು 2 ನೇ ಪ್ರತಿವಾದಿಗೆ ದಾವಾ ಐಟಂ ನಂ 4 ನ್ನು ಮಾರಾಟ ಮಾಡಿರುವ ಕ್ರಯ ಪತ್ರ ಎಂದು ಒಪ್ಪಿಕೊಂಡಿರುತ್ತಾರೆ. ನಾನು ನಿಪಿ-12 ರ ಕ್ರಯಪತ್ರ ನೋಂದಣಿಯಾಗುವ 12 ತಿಂಗಳು ಪೂರ್ವದಲ್ಲಿ 2 ನೇ ಪ್ರತಿವಾದಿಗೆ ಜಿಪಿಎ ಮಾಡಿಕೊಟ್ಟಿರುತ್ತೇನೆ. ನಿಪಿ-12 ರ ಕ್ರಯಪತ್ರವನ್ನು ನಾನು ರೂ. 60,000 ಗಳಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿ.

2021 ರ ಫೆಬ್ರವರಿಯಲ್ಲಿ ವಾದಿಯು ಜಮೀನನ್ನು ನಾನು ಸರಿಯಾಗಿ ನಿಗಾವಣೆ ಮಾಡುತ್ತಿಲ್ಲ ಎಂದು ಕೇಳಿರುತ್ತಾರೆ ಎಂದರೆ ಸರಿಯಲ್ಲ. ವಾದಿಗೆ ಮದುವೆಯಾದ ನಂತರ ಒಟ್ಟು ಕುಟುಂಬದ ಆದಾಯವನ್ನು ನೀಡಿರುತ್ತೀರಾ ಎಂದರೆ ಸಾಕ್ಷಿ ನಾನು ಯಾವುದೇ ಹಣವನ್ನು ನೀಡಿರುವುದಿಲ್ಲ ಆದರೆ ಅವರ ಯೋಗಕ್ಷೇಮವನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ ಎಂದು ನುಡಿಯುತ್ತಾರೆ. ನನಗೆ ಇಬ್ಬರು ಹೆಣ್ಣು ಮಕ್ಕಳು, ಒಬ್ಬಳು ವೈದ್ಯಕೀಯ ಶಿಕ್ಷಣ ಮಾಡುತ್ತಿದ್ದು ಇನ್ನೊಬ್ಬಳು ಪಿ ಹೆಚ್ ಡಿ ವಿದಾಭ್ಯಾಸ ಮಾಡುತ್ತಿದ್ದಾಳೆ. ವಾದಿಯು ಬಡತನದಿಂದ ಇರುತ್ತಾರೆ ಎಂದರೆ ಸರಿಯಲ್ಲ. ವಾದಿಯು ನನ್ನ ಬಳಿ ಹಿಸ್ಸೆಯನ್ನು ಕೇಳಿದ ನಂತರ ಉದ್ದೇಶ ಪೂರ್ವಕವಾಗಿ ದಾವಾ ಐಟಂ ನಂ 4 ನ್ನು

2 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಯು ನನಗೆ ನಿಪಿ-10(ಎ) ರಂತೆ ನೋಟಿಸು ಜಾರಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಗೆ ನಾನು ಗೌರವ ನೀಡದೆ ಒಟ್ಟು ಕುಟುಂಬದ ಆದಾಯದ ಲೆಕ್ಕ ಕೇಳಿದಾಗ ನಾನು ಅವರಿಗೆ ನಿಂಧಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಅಗತ್ಯ ಇಲ್ಲದಿದ್ದರೂ ಸಹ ನನ್ನ ಕೆಟ್ಟ ಚಟಗಳನ್ನು ಪೂರೈಸುವ ಸಲುವಾಗಿ ದಾವಾ ಐಟಂ ನಂ 4 ರ ಆಸ್ತಿಯನ್ನು ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳಿರುವಂತೆ ಯಾವುದೇ ಬ್ಯಾಂಕಿನಿಂದಾಗಲೀ ಖಾಸಗಿ ವ್ಯಕ್ತಿಗಳಿಂದಾಗಲೀ ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ. ಐಟಂ ನಂ 4 ರ ಆಸ್ತಿಯ ಸ್ವಾದೀನತೆ ಒಟ್ಟು ಕುಟುಂಬದಲ್ಲಿದ್ದರೂ ಸಹ ನಿಪಿ-4 ರಂತೆ ಸುಳ್ಳು ಪತ್ರವನ್ನು ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-12 ರಲ್ಲಿ ಯಾವ ಉದ್ದೇಶಕ್ಕೆ ಮಾರಾಟ ಮಾಡುತ್ತಿದ್ದೇನೆ ಎಂದು ನಮೂದು ಮಾಡಿಲ್ಲ ಎಂದರೆ ಸರಿ. ದಾವಾ ಐಟಂ ನಂ 4 ರ ಆಸ್ತಿಯ ಸ್ವಾದೀನತೆಯನ್ನು ಇವತ್ತಿಗೂ ನಾನೇ ಹೊಂದಿದ್ದರೂ ವಾದಿಗೆ ಮೋಸ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಚೌಳಹಿರಿಯೂರು ಗ್ರಾಮ ಕಡೂರು ತಾಲ್ಲೂಕಿನಲ್ಲಿ ಅತೀ ದೊಡ್ಡ ಗ್ರಾಮ ಎಂದರೆ ಸರಿ. ಅಲ್ಲಿ ಊರಿನ ಸಮೀಪ ಇರುವ ಒಂದು ಗುಂಟೆ ಜಮೀನಿಗೆ 1.5 ರಿಂದ 2.00 ಲಕ್ಷ, ಸ್ವಲ್ಪ ದೂರ ಇರುವ ಜಮೀನಿಗೆ ಒಂದು ಗುಂಟೆಗೆ ರೂ. 1.00 ಲಕ್ಷ ಬೆಲೆ ಇದೆ ಎಂದರೆ ಸಾಕ್ಷಿ ಅದು ಜಮೀನಿನ ಗುಣಮಟ್ಟದ ಮೇಲೆ ನಿರ್ಧಾರವಾಗುತ್ತದೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ 4 ಊರಿನಿಂದ 2 ಕಿಮಿ ದೂರದಲ್ಲಿರುತ್ತದೆ. ದಾವಾ ಐಟಂ ನಂ 4 ರ ಗುಂಟೆಗೆ ರೂ. 50,000 ಕ್ಕಿಂತಲೂ ಹೆಚ್ಚು ಬೆಲೆ ಬಾಳುತ್ತದೆ ಎಂದರೆ ಸಾಕ್ಷಿ ಕಡಿಮೆ ಇದೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ 4 ರ ಆಸ್ತಿಗೆ ರೂ. 36.00 ಲಕ್ಷಕ್ಕಿಂತಲೂ ಹೆಚ್ಚು ಬೆಲೆ ಬಾಳುತ್ತಿದ್ದರೂ ಕೇವಲ ರೂ. 60,000 ಗಳನ್ನು ತೋರಿಸಿ ಮಾರಾಟ ಮಾಡಿದಂತೆ ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ಜಮೀನನ್ನು ಮಾರಾಟ ಮಾಡುವ ಸಮಯದಲ್ಲಿ ನಾನು ವಾದಿಗೆ ಕರೆದರೂ ಆಕೆ ಬರಲಿಲ್ಲ. ನಾನು ವಾದಿಯನ್ನು ಕರೆದಿರುವ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇಲ್ಲ. ಸಾಕ್ಷಿ ನಾನು ಹಿಂದೆಯೂ 10 ಗುಂಟೆ ಆಸ್ತಿ ಮಾರಾಟ ಮಾಡಿದ್ದು ಆ ಸಮಯದಲ್ಲೂ ವಾದಿಗೆ ಕರೆದರೂ ಆಕೆ ಬರಲಿಲ್ಲ ಎಂದು ನುಡಿಯುತ್ತಾರೆ.

ನನ್ನ ಪ್ರಮಾಣಪತ್ರದಲ್ಲಿ ಹೇಳಿರುವಂತೆ ವಾದಿಯು ದಾವಾ ಐಟಂ ನಂ 4 ನ್ನು ಮಾರಾಟ ಮಾಡಲು ಮೌಖಿಕವಾಗಿ ಒಪ್ಪಿಗೆ ನೀಡಿರುತ್ತಾರೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿ.

ವಾದಿಗೆ ನಾನು ಗೌರವ ಕೊಡದೇ ದಾವಾ ಆಸ್ತಿಯಲ್ಲಿ ಹಿಸ್ಸೆಯನ್ನು ನೀಡದೇ ಅವಮಾನಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಿಯ ಮಕ್ಕಳನ್ನು ನಾನೇ ಓದಿಸಿರುತ್ತೇನೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನನ್ನ ತಂಗಿಗೆ ಹಿಸ್ಸೆಯನ್ನು ನೀಡುವುದನ್ನು ತಪ್ಪಿಸಲು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಹೇಳಿರುವಂತೆ ಚಿನ್ನಾಭರಣ, ವರದಕ್ಷಿಣೆ ನೀಡಿರುವುದು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು ಕಡೂರು.